**ಕರ್ನಾಟಕ ಸರ್ಕಾರ**

**(ನೋಂದಣಿ ಮತ್ತು ಮುದ್ರಾಂಕ ಇಲಾಖೆ)**

178

**ಸಂಖ್ಯೆ:** Comp/J-Slip/01/2008-09

**ಅಡಕ- ಒಂದು**

ನೋಂದಣಿ ಮಹಾ ಪರಿವೀಕ್ಷಕರು ಮತ್ತು
ಮುದ್ರಾಂಕಗಳ ಆಯುಕ್ತರವರ ಕಛೇರಿ,
ಶಿಂಷಾ ಭವನ, ನಂ.720, 8ನೇ ಬ್ಲಾಕ್,
46ನೇ ಅಡ್ಡ ರಸ್ತೆ, ಸಂಗಮ್ ಸರ್ಕಲ್,
ಜಯನಗರ, ಬೆಂಗಳೂರು-82.

**ದಿನಾಂಕ:** 19-10-2011

**ಜ್ಞಾಪನ**

**ವಿಷಯ:** ಉಪ-ನೋಂದಣಿ ಕಛೇರಿಗಳಲ್ಲಿ EPIC Number ನ್ನು ಪಕ್ಷಕಾರರಿಂದ ಪಡೆಯುವ ಬಗ್ಗೆ.

**ಉಲ್ಲೇಖ:** 1) ಕಾರ್ಯದರ್ಶಿಗಳು (ಭೂಮಿ & ಯು.ಪಿ.ಒ.ಆರ್) ರೆವಿನ್ಯೂ ಡಿಪಾರ್ಟ್‌ಮೆಂಟ್ ರವರ E-Mail ಪತ್ರ ದಿನಾಂಕ:13-09-2011.

2) ಈ ಕಛೇರಿಯ ಜ್ಞಾಪನ ಪತ್ರಸಂಖ್ಯೆ:Comp/J-Ship/01/2008-09 ದಿನಾಂಕ: 19-09-2011.

3) ಸರ್ಕಾರದ ಕಾರ್ಯದರ್ಶಿಗಳು ಕಂದಾಯ ಇಲಾಖೆ,ಭೂಮಿ ಮತ್ತು ಯು.ಪಿ.ಒ.ಆರ್ ರವರ ಅಸ ಪತ್ರ ಸಂಖ್ಯೆ: ಆರ್‌ಡಿ/91/ಸಕಾ(ಭೂ&ಯುಪಿಒಆರ್) 2011 ದಿನಾಂಕ: 15-10-2011.

**********

ಪ್ರಸ್ತಾವಿತ ವಿಷಯಕ್ಕೆ ಸಂಬಂಧಿಸಿದಂತೆ, ಪಕ್ಷಕಾರರು ಪತ್ರಗಳನ್ನು ನೋಂದಣಿಗೆ ಹಾಜುರುಪಡಿಸಿದಾಗ ಪಕ್ಷಕಾರರಿಂದ EPIC Numberಗಳನ್ನು ಸಂಗ್ರಹಿಸಬೇಕು ಎಂದು ಕಾರ್ಯದರ್ಶಿಗಳು (ಭೂಮಿ & ಯು.ಪಿ.ಓ.ಆರ್) ರವರು ತಿಳಿಸಿರುತ್ತಾರೆ (ಉಲ್ಲೇಖ ಪ್ರತಿ ಲಗತ್ತಿಸಿದೆ).

ಆದ್ದರಿಂದ ಉಪ-ನೋಂದಣಾಧಿಕಾರಿಗಳು ಪಕ್ಷಕಾರರಿಂದ ಕಡ್ಡಾಯವಾಗಿ EPIC Number ಗಳನ್ನು ಪಡೆದು ನೋಂದಣಿ ಕಾರ್ಯವನ್ನು ಮಾಡುವುದು ಹಾಗೂ EPIC Numberಗಳನ್ನು ಸಾರ್ವಜನಿಕರು ನೋಂದಣಿಗೆ ಹಾಜರಾಗುವಾಗ ಕಡ್ಡಾಯವಾಗಿ ತರುವಂತೆ ಮಾಹಿತಿಯನ್ನು ಸೂಚನಾ ಫಲಕದಲ್ಲಿ ಸಾರ್ವಜನಿಕರು ವೀಕ್ಷಿಸುವ ಹಾಗೆ ಹಾಕುವುದು ಹಾಗೂ ಸದರಿ ಮಾಹಿತಿಯನ್ನು ಎಲ್ಲಾ ಪತ್ರಬರಹಗಾರರ ಗಮನಕ್ಕೆ ತರುವಂತೆ ಉಲ್ಲೇಖ(2)ರ ಪತ್ರದಲ್ಲಿ ಸೂಚಿಸಲಾಗಿತ್ತು.

ಒಂದು ವೇಳೆ ಪಕ್ಷಕಾರರು EPIC ಕಾರ್ಡ್ ಹೊಂದಿರದಿದ್ದಲ್ಲಿ ಡ್ರೈವಿಂಗ್ ಲೈಸೆನ್ಸ್, ಪಾಸ್‌ಪೋರ್ಟ್, ಆಧಾರ ಗುರುತಿನಚೀಟಿ, ಭಾವ ಚಿತ್ರವಿರುವ ಬ್ಯಾಂಕುಗಳ ಪಾಸ್‌ಬುಕ್ ಪಡೆದುಕೊಂಡು ನೋಂದಣಿ ಕಾರ್ಯವನ್ನು ಮಾಡುವಂತೆ ಸೂಚಿಸಿದೆ. ಸಾರ್ವಜನಿಕರಲ್ಲಿ EPIC ಕಾರ್ಡ್ ಇದ್ದಲ್ಲಿ ಸದರಿ ಕಾರ್ಡ್ ತರಲು ಸೂಚಿಸಬಹುದಾಗಿರುತ್ತದೆ.

ನೋಂದಣಿ ಮಹಾ ಪರಿವೀಕ್ಷಕರು ಮತ್ತು
ಮುದ್ರಾಂಕಗಳ ಆಯುಕ್ತರು, ಬೆಂಗಳೂರು.

**ಇವರಿಗೆ,**

ರಾಜ್ಯದ ಎಲ್ಲಾ ಉಪ- ನೋಂದಣಾಧಿಕಾರಿಗಳಿಗೆ ಸೂಕ್ತಕ್ರಮಕ್ಕಾಗಿ.

**ಪ್ರತಿಯನ್ನು:**

ರಾಜ್ಯದ ಎಲ್ಲಾ ಜಿಲ್ಲಾ ನೋಂದಣಾಧಿಕಾರಿಗಳಿಗೆ .